ತೆಂಗಿನ ಮರಗಳಿಲ್ಲ. ಸೇಂದಿ ತೆಗೆಯಲು ಗಿಡಗಳೇ ಇಲ್ಲವೆಂದರೆ basic ಆಗಿ ಎಲ್ಲಿಂದ ಸೇಂದಿ ತೆಗೆಯುತ್ತಾರೆ?

ಶ್ರೀ ಸುಭಾಷ್ ಆರ್. ಗುತ್ತೇದಾರ್ : ಸರ್ವೇ ಮಾಡಿಸಿ. ಅಲ್ಲಿ ಎಲ್ಲಿದೆ ಅಲ್ಲಿಗೆ ಕೊಡಿ.

ಶ್ರೀ ಎಂ.ಪಿ. ರೇಣುಕಾಚಾರ್ಯ : ಈಗಾಗಲೇ ಆ ಭಾಗದ ಮೂರ್ತೆದಾರರು ನನಗೂ ವಿನಂತಿ ಮಾಡಿದ್ದಾರೆ. ಸೇಂದಿ ಗಿಡದ ಬಗ್ಗೆ ಸರ್ವೇ ಮಾಡಿಸುತ್ತೇವೆ. ಆದರೆ, commit ಆಗುವುದಿಲ್ಲ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಸರ್ವೇ ಮಾಡಿಸುವು ದಕ್ಕಾದರೂ commit ಆಗಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಸರ್ವೇ ಮಾಡಿಸಿ, ವರದಿ ತೆಗೆದುಕೊಂಡು ಮರ ಇದ್ದರೆ ಕೊಡಿ.

ಶ್ರೀ ಎಂ.ಪಿ. ರೇಣುಕಾಚಾರ್ಯ : ಸರ್ವೇ ಮಾಡಿಸುತ್ತೇನೆ.

4) ವಿಷಯ : ಹಳಿಯಾಳ ತಾಲ್ಲೂಕಿನಲ್ಲಿ ಹರಿಯುವ ಕಾಳಿ ನದಿ ನೀರನ್ನು ಭೂ ಪ್ರದೇಶಕ್ಕೆ ನೀರಾವರಿ ಅನುಕೂಲ ಮಾಡಿಕೊಡುವ ಕಾಮಗಾರಿಯನ್ನು 2012–13ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳುವ ವಿಷಯದ ಬಗ್ಗೆ

ಶ್ರೀ ಸುನೀಲ ವಿ. ಹೆಗಡೆ (ಹಳಿಯಾಳ) : ಮಾನ್ಯ ಅಧ್ಯಕ್ಷರೆ, ಹಳಿಯಾಳ ತಾಲ್ಲೂಕಿನಲ್ಲಿ ಹರಿಯುವ ಕಾಳಿ ನದಿ ನೀರನ್ನು ಭೂ ಪ್ರದೇಶಕ್ಕೆ ನೀರಾವರಿ ಅನುಕೂಲ ಮಾಡಿಕೊಡುವ ಕಾಮಗಾರಿಯನ್ನು 2012–13ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳುವ ವಿಷಯದ ಬಗ್ಗೆ ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ನಾನೂ ನೀರಾವರಿ ಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ. ನೀವು ಧಾರಾಳವಿದ್ದೀರಿ, ಅದಕ್ಕೋಸ್ಕರ ಆ ಕಡೆಗೆ ಈ ವರ್ಷ 17 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಆ ಭಾಗದ ಶಾಸಕರು ಏನೂ ಕೇಳುವುದಕ್ಕೆ ಹೋಗುವುದಿಲ್ಲ. ಅಲ್ಲಿ ನೀರು ಇರುವುದರಿಂದ ಕೇಳುತ್ತಿದ್ದಾರೆ. ದಯವಿಟ್ಟು, ಬೇರೇನೂ ಹೇಳದೆ, announce ಮಾಡಿ.

ಪರಿಶೀಲನೆ ಮಾಡುತ್ತೇವೆಂದು ಹೇಳುವುದು ಬೇಡ. 25 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿ.

ಶ್ರೀ ಬಸವರಾಜ ಎಸ್. ಬೊಮ್ಮಾಯಿ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೆ, ಹಳಿಯಾಳ ತಾಲ್ಲೂಕಿನಲ್ಲಿ ಹರಿಯುವ ಕಾಳಿನದಿ, ಆ ತಾಲ್ಲೂಕಿನ ಕೆರೆಗಳಿಗೆ ಬ್ಯಾರೇಜ್ ಮುಖಾಂತರ ನೀರನ್ನು ಕೊಡುವ ಯೋಜನೆ ಇದೆ. ಇದರ ಬಗ್ಗೆ ಹಿಂದೆ ಪ್ರಸ್ತಾವನೆ ಆಗಿದೆ. ಇಲ್ಲಿ ಎರಡು ವಿಚಾರಗಳಿವೆ. ಮೊದಲನೆಯದಾಗಿ, ಸೂಪಾ ಪವರ್ ಪ್ರಾಜೆಕ್ಟ್‌ಗೆ ಈ ನೀರನ್ನು ಬಳಕೆ ಮಾಡುವುದರ ಮೂಲಕ ಸೂಪಾ ಪ್ರಾಜೆಕ್ಟ್‌ಗೆ ನೀರು ಕಡಿಮೆಯಾಗಬಾರದು. Karnataka Power Corporation ನವರು ಈಗಾಗಲೇ ಬಹಳಷ್ಟು objection ಹಾಕಿದ್ದಾರೆ. ಹಿಂದೆ ಆ ಕಾರ್ಖಾನೆಗೆ ನೀರು ತೆಗೆದುಕೊಂಡು ಹೋಗಬೇಕಾದರೇ ಬಹಳಷ್ಟು objections ಬಂದಿತ್ತು. Karnataka Power Corporation ನವರು ನಮಗೆ ನೀರು ಕಡಿಮೆ ಯಾಗುತ್ತದೆ, Power generation ಕಡಿಮೆ ಆಗುತ್ತದೆನ್ನುವ objection ಮಾಡಿದ್ದರು. ತದನಂತರ, ಒಂದು ಸಣ್ಣ ನೀರಾವರಿಯಲ್ಲಿ ಈ ಯೋಜನೆಯ ಸರ್ವೇ ಮಾಡುವ ಪ್ರಯತ್ನ ಕೂಡ ಮಾಡಿದ್ದೆವು. ಆದರೆ, ಕೇವಲ line estimate and line survey ಆಗಿದೆಯೇ ಹೊರತು detailed survey ಯಾಗಿಲ್ಲ. ಸನ್ಮಾನ್ಯ ಶಾಸಕರಾದ ಸುನೀಲ ವಿ. ಹೆಗಡೆಯವರು ಆಸಕ್ತಿವಹಿಸಿದ ಮೇಲೆ ನಾನೇ ಅದರ detailed survey ಮಾಡುವುದಕ್ಕೆ ಹೇಳಿದ್ದೇನೆ. ಬಹುತೇಕವಾಗಿ ಅದರ ಸರ್ವೇ ರಿಪೋರ್ಟ್ ಬರುತ್ತದೆ. ಅದು ಬಂದ ತಕ್ಷಣ ಅದರ technicality, feasibility ನೋಡಿಕೊಂಡು ಮುಂದಿನ ಕ್ರಮವನ್ನು ಜರುಗಿಸುತ್ತೇನೆ.

ಶ್ರೀ ಸುನೀಲ ವಿ. ಹೆಗಡೆ : ಮಾನ್ಯ ಸಚಿವರಲ್ಲಿ ವಿನಂತಿಸುವುದೇನೆಂದರೆ, ಅದನ್ನು ಬೇಗ ಮಾಡಿದರೆ ಒಳ್ಳೆಯದು.

ಶ್ರೀ ಹೆಚ್.ಡಿ. ರೇವಣ್ಣ : Technical feasibility ಇದ್ದರೆ ಮಾಡುತ್ತೇನೆಂದು ಹೇಳಿ.

ಶ್ರೀ ಬಸವರಾಜ ಎಸ್. ಬೊಮ್ಮಾಯಿ : Technical feasibility report ಪ್ರಕಾರ ಮುಂದಿನ ಕ್ರಮ ಜರುಗಿಸುತ್ತೇವೆ.